ಬೆಳಗಾವಿ ಜಿಲ್ಲೆಯಲ್ಲಿನ ಕಬ್ಬನ್ನು ಮಹಾರಾಷ್ಟ್ರಕ್ಕೆ ಸಾಗಿಸುವುದು.

91(411) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ್ (ಗೋಕಾಕ್) :— ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಜಮೀನಿನ ವಿಸ್ತೀರ್ಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) 1998-99ನೇ ಸಾಲಿನಲ್ಲಿ ಈಗಾಗಲೇ ಸುರಿಸಲಾಗಿರುವ ಕಬ್ಬಿನ ಪ್ರಮಾಣವೆಷ್ಟು

ಇ) ಮಹಾರಾಷ್ಟ್ರಕ್ಕೆ ಕಬ್ಬು ಸಾಗಿಸಲು ಅನುಮತಿ ಪಡೆಯಲಾಗಿದೆಯೇ;

ಈ) ಕಾರ್ಖಾನೆಗಳು ಮುಚ್ಚುವ ಪೂರ್ವದಲ್ಲಿ ಎಲ್ಲಾ ಕಬ್ಬನ್ನು ಸಾಗಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಉ) ಕಬ್ಬನ್ನು ಸಾಗಿಸುವಲ್ಲಿ ವಿಳಂಬವಾದಲ್ಲಿ ರೈತರಿಗೆ ಪರಿಹಾರ ಕಲ್ಪಿಸಲಾಗುವುದೇ?

ಶ್ರೀ ಹೆಚ್. ಶಿವಪ್ಪ (ಸಕ್ಕರೆ ಸಚಿವರು) :—

ಅ) ಬೆಳಗಾವಿ ಜಿಲ್ಲೆಯಲ್ಲಿ 2,83,798 ಏಕರೆಯಲ್ಲಿ ಕಬ್ಬನ್ನು ಈ ವರ್ಷ ಬೆಳೆಯಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ-ಆರಲ್ಲಿ ಲಗತ್ತಿಸಿದೆ.

ಆ) ಈ ಜಿಲ್ಲೆಯಲ್ಲಿ ಒಟ್ಟು 64.27 ಲಕ್ಷ ಟನ್ ಕಬ್ಬಿನ ಉತ್ಪಾದನೆ ಇದ್ದು ಈವರೆಗೆ 29.21 ಲಕ್ಷ ಟನ್ ಕಬ್ಬನ್ನು ನುರಿಸಲಾಗಿದೆ.

ಇ) ಅನುಮತಿ ಪಡೆಯಲು ತೀವ್ರ ಪ್ರಯತ್ನಗಳು ನಡೆದಿದೆ.

ಈ) ಹೆಚ್ಚುವರಿ ಕಬ್ಬಿನ ವಿಲೇವಾರಿಗಾಗಿ ಸರ್ಕಾರ ಈ ಕೆಳಕಂಡ ಕ್ರಮ ಕೈಗೊಂಡಿದೆ.

1) ರಾಜ್ಯದಲ್ಲಿನ ಎಲ್ಲಾ ಸಕ್ಕರೆ ಕಾರ್ಖಾನೆಗಳ 180 ಉತ್ಪಾದನಾ ಜನಗಳ ಬದಲು 200 ದಿನಗಳಿಗೆ ವಿಸ್ತರಿಸಲಾಗಿದೆ.

2) ಖಂಡಸಾರಿ ಘಟಕಗಳಿಗೆ 90 ಉತ್ಪಾದನಾ ದಿನಗಳ ಬದಲು 189 ದಿನಗಳವರೆಗೆ ವಿಸ್ತರಿಸಲಾಗಿದೆ.

3) ಬೆಲ್ಲ ಉತ್ಪಾದನಾ ಘಟಕಗಳಿಗೆ ಈಗಿರುವ ಲೈಸೆನ್ಸಿಂಗ್ ಪದ್ಧತಿಯಿಂದ ತಾತ್ಕಾಲಿಕ ವಿನಾಯಿತಿ ನೀಡಲಾಗಿದೆ.

4) ನೋಂದಾಯಿಸದಿರುವ ಕಬ್ಬನ್ನು ಹೊರರಾಜ್ಯಗಳಿಗೆ ಸಾಗಿಸಲು ರೈತರಿಗೆ ತಮ್ಮ ಸ್ವಂತ ಭಾದ್ಯತೆಯ ಮೇರೆಗೆ ಮುಕ್ತ ಅವಕಾಶವನ್ನು ಕೊಡಲಾಗಿದೆ.

5) ಹೊರ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಗೋವಾಗಳ ಸಕ್ಕರೆ ಕಾರ್ಖಾನೆಗಳಿಗೆ ನೋಂದಾಯಿಸಿರುವ ಮತ್ತು ನೋಂದಾಯಿಸದ ಹೆಚ್ಚುವರಿ ಕಬ್ಬನ್ನು ಸಾಗಿಸಲು ಅನುಮತಿ ನೀಡಲಾಗಿದೆ.

6) ಕಬ್ಬಿನ ಕೊರತೆಯಿರುವ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚುವರಿ ಕಬ್ಬು ಲಭ್ಯವಿರುವ ಕಾರ್ಖಾನೆಗಳಿಂದ ಖರೀದಿಸಲು ಅನುಮತಿ ನೀಡಲಾಗಿದೆ.

ಈ) ಇಲ್ಲ, ಈ ಬಗ್ಗೆ ಶಾಸನಬದ್ಧವಾಗಿ ಯಾವುದೇ ಪರಿಹಾರ ಕೊಡಲು ಅವಕಾಶವಿಲ್ಲ. ಶುಗರ್ ಕೇಸ್ ಕಂಟ್ರೋಲ್ ಆರ್ಡರ್ 1966ರ ಅನ್ವಯ ಸದಸ್ಯರ ಕಬ್ಬನ್ನು ಕಾರ್ಖಾನೆಗಳು ನೋಂದಾಯಿಸಿಕೊಳ್ಳಬೇಕಾಗಿದ್ದು, ಹೀಗೆ ನೋಂದಾಯಿಸಿದ ಕಬ್ಬನ್ನು ರೈತರು ಕಾರ್ಖಾನೆಗೆ ಸರಬರಾಜು ಮಾಡಬೇಕಾದುದು ಕಾರ್ಖಾನೆ ಈ ಕಬ್ಬನ್ನು ಖರೀದಿಸಬೇಕಾದುದು ಶಾಸನಬದ್ಧ ಜವಾಬ್ದಾರಿಯಾಗಿರುತ್ತದೆ. ಕಬ್ಬಿನ ಕೊರತೆ ಇದ್ದಾಗ ಸಮಸ್ಯೆ ಉದ್ಭವಿಸುವುದಿಲ್ಲ. ಆದರೆ, ಹೆಚ್ಚುವರಿ ಕಬ್ಬಿನ ಉತ್ಪಾದನೆಯಾದಾಗ ಸಮಸ್ಯೆ ಉದ್ಭವಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಸಮಸ್ಯೆಯ ಪರಿಹಾರಕ್ಕಾಗಿ ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬಂದಿದೆ. 1998-99ನೇ ಸಾಲಿನಲ್ಲಿ ಹೆಚ್ಚುವರಿ ಕಬ್ಬಿನ ಸಮಸ್ಯೆ ಇರುವುದರಿಂದ ಸರ್ಕಾರ (ಈ) ನಲ್ಲಿ ತಿಳಿಸಿರುವ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಹಾಗೂ ಪರಿಹಾರ ಕೊಡುಲು ಯಾವುದೇ ಶಾಸನಬದ್ಧ ಅವಕಾಶವಿಲ್ಲದಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

1998-99ನೇ ಸಾಲಿನ ಬೆಳಗಾವಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಕಬ್ಬು ಬೆಳೆ ಕ್ಷೇತ್ರದ ವಿವರ.

ಕ್ಷೇತ್ರ : ಹೆಕ್ಟೇರ್‌ಗಳಲ್ಲಿ

ಕ್ರ.ಸಂ.	ತಾಲ್ಲೂಕು	ಬಿತ್ತನೆ ಕ್ಷೇತ್ರ (ಹೆ)
1.	ಅಥಣಿ	26411
2.	ಬೈಲಹೊಂಗಲ	9513
3.	ಬೆಳಗಾವಿ	7001
4.	ಚಿಕ್ಕೋಡಿ	17000
5.	ಗೋಕಾಕ	13202
6.	ಹುಕ್ಕೇರಿ	10534
7.	ಖಾನಾಪುರ	13024
8.	ರಾಯಬಾಗ್	15420
9.	ರಾಮದುರ್ಗ	1377
10.	ಸವದತ್ತಿ	1491
		114973

Talukwise information about sugarcane area in Belgaum Dist.

Sl. No.	Taluk	Area (In Hecters)
1.	Athani	26411
2.	Bailahongal	9513
3.	Belgavi	7001
4.	Chikodi	17000
5.	Gokak	13202
6.	Hukkeri	10534
7.	Khanapur	13024
8.	Raibag	15420
9.	Ramadurg	1377
10.	Savadatti	1491
		114973

ಪಾಂಡವಪುರದಲ್ಲಿ ಕುಡಿಯುವ ನೀರಿನ ಸಮಸ್ಯೆ.

92(285) ಶ್ರೀ ಕೆ.ಎಸ್. ಪುಟ್ಟಣಯ್ಯ (ಪಾಂಡವಪುರ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕ್ ಉಪವಿಭಾಗದ ಮುಖ್ಯ ಕೇಂದ್ರವಾಗಿದ್ದು ಇಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ಯಾವುವು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

1. ಹೌದು

ಈಗ ಪಾಂಡವಪುರಕ್ಕೆ ವಿ.ಸಿ. ನಾಲೆಯಿಂದ ನೀರು ಪೂರೈಸಲಾಗುತ್ತಿದ್ದು, ಸದರಿ ನಾಲೆಯಲ್ಲಿ ನೀರು ಸ್ಥಗಿತಗೊಂಡಾಗ ನೀರು ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

2.ಈ ತೊಂದರೆಯನ್ನು ಶಾಶ್ವತವಾಗಿ ನಿವಾರಿಸಲು ಶ್ರೀರಂಗಪಟ್ಟಣದ ಹತ್ತಿರ ಕಾವೇರಿ ನದಿ ಮೂಲವಾಗಿಟ್ಟುಕೊಂಡು ರೂ. 525 ಲಕ್ಷಗಳ ಅಂದಾಜು ಪಟ್ಟಿಯನ್ನು ಮಂಡಲಿಯು ತಯಾರಿಸಿರುತ್ತದೆ. ಇದು ಇನ್ನೂ ಸರ್ಕಾರಕ್ಕೆ ಸಲ್ಲಿಸಲು ಬಾಕಿ ಇರುತ್ತದೆ.